ಅ) ಕಾವೇರಿ ೩ನೇ ಹಂತದ ಯೋಜನೆಯು ಸಂಪೂರ್ಣವಾಗಿ ಮುಗಿದಿದೆಯೇ? ಇದು ನಿಜವೇ?

ಆ) ಹಾಗಿದ್ದಲ್ಲಿ ಈಗಿನ ಪರಿಸ್ಥಿತಿ?

ಇ) ಇದುವರೆಗೆ ಈ ಯೋಜನೆಗೆ ಒಟ್ಟು ಎಷ್ಟು ಹಣ ವೆಚ್ಚವಾಗಿದೆ?

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುವುದು?

ಉ) ಸರ್ಕಾರವು ಕಾವೇರಿ ನಾಲ್ಕನೇ ಘಟ್ಟದ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುವುದು?

ಊ) ಇದರ ಅಂದಾಜು ವೆಚ್ಚವೆಷ್ಟು?

ಋ) ಈ ಯೋಜನೆಗೆ ಹಣ ಒದಗಿಸುವ ಮೂಲಗಳಾವುವು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಕಾವೇರಿ ನೀರು ಸರಬರಾಜು ೩ನೇ ಹಂತದ ಯೋಜನೆಯು ಇನ್ನೂ ಪೂರ್ಣಗೊಂಡಿಲ್ಲ.

ಆ) ಕಾವೇರಿ ೩ನೇ ಹಂತದ ಯೋಜನೆಯನ್ನು ಜೂನ್ ೧೯೨೨ರ ವೇಳೆಗೆ ಪೂರ್ಣಗೊಳಿಸಲು ಯೋಚಿಸಲಾಗಿದೆ. ಶೇಕಡಾ ೮೦ ಭಾಗ ಮುಗಿದಿರುತ್ತದೆ ಉಳಿದ ಭಾಗ ಪ್ರಗತಿಯಲ್ಲಿದೆ.

ಇ) ಇದುವರೆಗೆ ಕಾವೇರಿ ೩ನೇ ಹಂತದ ಯೋಜನೆಗೆ ಒಟ್ಟು ೧೭೭.೩೪ ಕೋಟಿ ರೂಪಾಯಿಗಳು ಫೆಬ್ರವರಿ ೧೯೯೨ರ ಅಂತ್ಯದವರೆಗೆ ವೆಚ್ಚವಾಗಿದೆ.

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ೫೧.೮೦ ಕೋಟಿ ರೂ. ಗಳು ಬೇಕಾಗುವುದು.

ಉ) ಕಾವೇರಿ ನಾಲ್ಕನೇ ಘಟ್ಟದ ಯೋಜನೆಯನ್ನು ಎರಡು ಹಂತಗಳಲ್ಲಿ ತೆಗೆದುಕೊಳ್ಳಲು ಯೋಚಿಸಲಾಗಿದ್ದು, ಮೊದಲ ಹಂತವನ್ನು ೧೯೯೨-೯೩ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಊ) ಕಾವೇರಿ ನಾಲ್ಕನೇ ಹಂತದ ಒಟ್ಟು ಅಂದಾಜು ವೆಚ್ಚ ೧೦೦೦ ಕೋಟಿ ರೂ. ಗಳು.

ಋ) ಕಾವೇರಿ ನಾಲ್ಕನೇ ಹಂತದ ಯೋಜನೆಗಾಗಿ ಹಣ ಒದಗಿಸಲು ಈ ಕೆಳಕಂಡ ಮೂಲಗಳನ್ನು ಕೇಳಲಾಗುವುದು.

೧) ಜೀವವಿಮಾ ಇಲಾಖೆ, ೨) ರಾಜ್ಯ ಸರ್ಕಾರ, ೩) ಹುಡ್ಕೋ, ೪) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ೫) ಬೆಂಗಳೂರು ಮಹಾನಗರ ಪಾಲಿಕೆ, ೬) ಕೇಂದ್ರ ಸರ್ಕಾರದ ಅಧೀನ ಇಲಾಖೆಗಳು, ೭) ರಕ್ಷಣಾ ಇಲಾಖೆ, ೮) ರೈಲ್ವೆ ಇಲಾಖೆ ಮತ್ತು ಭಾರೀ ಕಾರ್ಖಾನೆಗಳು.

ರಾಜ್ಯ ನೀರಾವರಿ ಯೋಜನೆಗಳಿಗೆ ವೆಚ್ಚವನ್ನು ಭರಿಸಲು ಸರ್ಕಾರಿ ನೌಕರರ ವೇತನದಲ್ಲಿ ಶೇ. ೧೦ ರಷ್ಟು ಕಡಿತ ಮಾಡಿರುವ ಬಗ್ಗೆ

೧೪೭೯ (೨೧೬೩) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ನೀರಾವರಿ ಯೋಜನೆಗಳಿಗೆ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರಿ ನೌಕರರಿಗೆ,

ಸಹಾಯಾನುದಾನ ಪಡೆಯುತ್ತಿರುವ ಸಂಸ್ಥೆಗಳ ನೌಕರರಿಗೆ, ರಾಜ್ಯ ಮಟ್ಟ ಹಾಗೂ ಸರ್ಕಾರದ ಬೊಕ್ಕಸದಿಂದ ಪಡೆಯುತ್ತಿರುವ ನೌಕರರಿಗೆ ವೇತನದಲ್ಲಿ ಶೇ. ೧೦ ರಷ್ಟು ಕಡಿತ ಮಾಡಿರುವುದು ವಾಸ್ತವವೇ?

ಆ) ಹಾಗಿದ್ದಲ್ಲಿ ಈ ಹಣವನ್ನು ಐದು ವರ್ಷಗಳ ನಂತರ ಸಮಾನ ಪಾಲಿನಲ್ಲಿ ಸರ್ಕಾರವು ವಾಪಸ್ಸು ಮಾಡಬಹುದು (ಅಂದರೆ ರೂ. ೧೦೦೦ ಗಳನ್ನು ನೌಕರ ನೀಡಿದ್ದಲ್ಲಿ ಸರ್ಕಾರವು ರೂ. ೨೦೦೦ ರೂಗಳನ್ನು ನೀಡುವುದು)?

ಇ) ಆದಾಯ ತೆರಿಗೆ ಸೌಲಭ್ಯವನ್ನು ತನ್ನ ನೌಕರರಿಗೆ ಒದಗಿಸಲು ರಾಜ್ಯ ಸರ್ಕಾರವು ಭಾರತ ಸರ್ಕಾರದ ಸಹಮತಿ ಪಡೆಯುತ್ತಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) — ಇಲ್ಲ —

ಆ) ಮೇಲಿನ ಉಪ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉಪ ಪ್ರಶ್ನೆ (ಆ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೀಸಲಾತಿ ಹುದ್ದೆಗಳನ್ನು ಪರಿಶೀಲಿಸುವ ಬಗ್ಗೆ

೧೪೬೦ (೨೧೬೪). ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಇಲಾಖೆ, ಸಹಕಾರ ಸಂಘಗಳು ಹಾಗೂ ಇತರ ಎಲ್ಲಾ ಸ್ವಾಮ್ಯ ಸರ್ಕಾರಿ ರಂಗದ ಉದ್ಯಮೆಗಳು ಪೌರಾಡಳಿತ ಮುಡಳಿ ಮತ್ತು ಹರಿಜನ-ಗಿರಿಜನರ ಹುದ್ದೆಗಳ ಮೀಸಲಾತಿಯನ್ನು ಪರಿಶೀಲಿಸುವವರಾರು?

ಆ) ಪರಿಶೀಲಿಸುವುದಕ್ಕೆ ಪ್ರತ್ಯೇಕ ಇಲಾಖೆಯಿಲ್ಲದಿದ್ದಲ್ಲಿ ಮೀಸಲಾತಿಯನ್ನು ಕಂಡು ಹಿಡಿಯಲು ಅನುಸರಿಸುತ್ತಿರುವ ವಿಧಾನಗಳಾವುವು?

ಇ) ಮೀಸಲಾತಿಯನ್ನು ಪಾಲಿಸದಿದ್ದವರ ಮೇಲೆ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಸಂಬಂಧಪಟ್ಟ ಆಡಳಿತ ಇಲಾಖೆ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರದ ಮೀಸಲಾತಿ ನೀತಿಯನ್ನು ಉಲ್ಲಂಘಿಸುವ ಅಧಿಕಾರಿಗಳ ಮೇಲೆ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ ೧೯೯೦ರ ಮೇರೆಗೆ ದಂಡ ವಿಧಾನವನ್ನು ವಿಧಿಸಬಹುದಾಗಿದೆ.